ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ಮತ್ತು ವಿಜ್ಞಾನಗಳ ಸಂಸ್ಥೆ, ಹಾಸನ.
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN
Website: www.hims-hassan.org Phone/Fax No.08172-231699, 231599, Email:directorhims@yahoo.com

# 31ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

## ದಿನಾಂಕ:06–01–2018, ಶನಿವಾರ, ಬೆಳಗ್ಗೆ:11.00 ಗಂಟೆಗೆ,

:ಸ್ಥಳ:

ಕೊಠಡಿ ಸಂಖ್ಯೆ: 301, 3ನೇ ಮಹಡಿ,

ವಿಧಾನ ಸೌಧ, ಬೆಂಗಳೂರು

ಕರ್ನಾಟಕ ಸರ್ಕಾರ
# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
# HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699 Email:directorhims@yahoo.com

## 31ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

ದಿನಾಂಕ:06-01-2018 ಶನಿವಾರ, ಬೆಳಗ್ಗೆ:.11.00ಗಂಟೆಗೆ ಕೊಠಡಿ ಸಂಖ್ಯೆ:301, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು ಇಲ್ಲಿ ಸನ್ಮಾನ್ಯ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರ ಘನ ಅಧ್ಯಕ್ಷತೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 31ನೇ ಆಡಳಿತ ಮಂಡಳಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ: 8** **ಹಾಜರಿದ್ದ ಸದಸ್ಯರ ಸಂಖ್ಯೆ:05**

| | | | |
|---|---|---|---|
| 01 | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು,<br>ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ | ಅಧ್ಯಕ್ಷರು | ಹಾಜರಿರುತ್ತಾರೆ |
| 02 | ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ,<br>ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವಿಧಿ, 6ನೇ ಮಹಡಿ, 4ನೇ ಗೇಟ್, ಬೆಂಗಳೂರು. | ಉಪಾಧ್ಯಕ್ಷರು | ಹಾಜರಿರುತ್ತಾರೆ |
| 03 | ಮಾನ್ಯ ಉಪಕುಲಪತಿಗಳು,<br>ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ,<br>ಕರ್ನಾಟಕ, ಜಯನಗರ, ಬೆಂಗಳೂರು. | ಸದಸ್ಯರು | -- |
| 04 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 05 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ, ಬೆಂಗಳೂರು. | ಸದಸ್ಯರು | -- |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | |
|---|---|---|---|
| 06 | ಮಾನ್ಯ ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,<br>ಕರ್ನಾಟಕ ಸರ್ಕಾರ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 07 | ಮಾನ್ಯ ಜಿಲ್ಲಾಧಿಕಾರಿಗಳು,<br>ಹಾಸನ ಜಿಲ್ಲೆ, ಹಾಸನ. | ಸದಸ್ಯರು | – |
| 08 | ಮಾನ್ಯ ನಿರ್ದೇಶಕರು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

| **ಅಜೆಂಡಾ ಕ್ರ.ಸಂ.** | **ವಿಷಯ** | |
|---|---|---|
| 01 | ದಿನಾಂಕ:31–08–2017 ರಂದು ನಡೆದ 30ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಅನುಪಾಲನಾ ವರದಿಯನ್ನು ಓದಿ ಅನುಮೋದಿಸುವುದು. | ದಿನಾಂಕ:31–08–2017 ರಂದು ನಡೆದ 30ನೇ ಆಡಳಿತ ಮಂಡಳಿ ಸಭೆಯಲ್ಲಿ 18 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳ ಅನುಪಾಲನಾ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. ಸದರಿ ಸಭೆಯ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.<br>ಅಜೆಂಡಾ ಕ್ರಮ ಸಂಖ್ಯೆ: 16ರಲ್ಲಿ ಹಾಸನ ಮತ್ತು ಹೊಳೆನರಸೀಪುರ ನರ್ಸಿಂಗ್ ಕಾಲೇಜುಗಳಿಗೆ ಕೊರತೆ ಇರುವ ಸಿಬ್ಬಂದಿಗಳ ನೇಮಕಾತಿ ಬಗ್ಗೆ ತೆಗೆದು ಕೊಂಡಿರುವ ಕ್ರಮದ ಅನುಪಾಲನಾ ವರದಿಯನ್ನು ಅನುಮೋದಿಸಲಾಯಿತು.<br>ಮುಂದುವರೆದು ನರ್ಸಿಂಗ್ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿಗಳ ಕೊರತೆ ಇರುವುದರಿಂದ ಹಾಲಿ ಬೋಧಕ ಆಸ್ಪತ್ರೆಯಲ್ಲಿ ಎಮ್.ಎಸ್ಸಿ ನರ್ಸಿಂಗ್ ಪದವಿ ಹೊಂದಿರುವವರಿಂದ ಹೆಚ್ಚುವರಿಯಾಗಿ ಉಪನ್ಯಾಸ ನೀಡುವ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಮಾಡಲಾಗಿದ್ದು, ಸದರಿ ಸಿಬ್ಬಂದಿಯವರಿಗೆ ಗೌರವಧನವಾಗಿ ರೂ.100.00 ಪಾವತಿಸಲಾಗುತ್ತಿದೆ. ಸಾರಿಗೆ ವೆಚ್ಚವೇ ಅಧಿಕವಾಗುವುದರಿಂದ ಕಷ್ಟವಾಗುತ್ತಿದೆ ಎಂದು ಸಿಬ್ಬಂದಿಗಳು ಕೋರಿರುವ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯ ಅವಗಾಹನೆಗೆ ತಂದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ನರ್ಸಿಂಗ್ ಕಾಲೇಜುಗಳಿಗೆ ಹೊಸದಾಗಿ ಬೋಧಕ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವವರೆಗೆ ಹೆಚ್ಚುವರಿಯಾಗಿ ಉಪನ್ಯಾಸ ನೀಡುವ ಅತಿಥಿ ಉಪನ್ಯಾಸಕರುಗಳಿಗೆ ತಾತ್ಕಾಲಿಕವಾಗಿ ಒಂದು ಉಪನ್ಯಾಸಕ್ಕೆ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | |
|---|---|---|
| | | ರೂ.250.00 ರೂಪಾಯಿಗಳನ್ನು ನಿಗದಿಪಡಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 02 | ದಿನಾಂಕ: 28-11-2017 ರಂದು ನಡೆದ 18ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳನ್ನು ಓದಿ ಅನುಮೋದಿಸುವ ಬಗ್ಗೆ. | ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆಕುಕ, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:28-11-2017ರಂದು ನಡೆದ 18ನೇ ಆರ್ಥಿಕ ಸಮಿತಿ ಸಭೆಯಲ್ಲಿ 26 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡ ನಿರ್ಣಯಗಳ ಸಭಾ ನಡವಳಿಯನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. ಸದರಿ ಸಭೆಯ ನಡವಳಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.<br>**<u>ಅಜೆಂಡಾ ಕ್ರಮ ಸಂಖ್ಯೆ:22ರ</u>** ಅಂಗವಿಕಲ ರೋಗಿಗಳಿಗೆ ರ್‍ಯಾಂಪ್ ಅಳವಡಿಸುವ ಕಾಮಗಾರಿಯ ಬಗ್ಗೆ ಚರ್ಚಿಸುತ್ತಾ ರ್‍ಯಾಂಪ್ ಅಳವಡಿಕೆಗೆ ಅನುಮೋದನೆ ನೀಡಲಾಯಿತು. ಅಂಗವಿಕಲ ರೋಗಿಗಳಿಗೆ ಅನುಕೂಲವಾಗುವಂತೆ ಹಾಲಿ ಇರುವ ಶೌಚಾಲಯಗಳ ಪೈಕಿ ಅವಶ್ಯ ಇರುವ ಸ್ಥಳದಲ್ಲಿ ಅಂಗವಿಕಲ ಸ್ನೇಹಿ ಶೌಚಾಲಯವನ್ನಾಗಿ ಮಾರ್ಪಡಿಸಲು ತಕ್ಷಣ ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 03 | ದಿನಾಂಕ:06-09-2017 ರಂದು ನಡೆದ 17ನೇ ಖರೀದಿ ಸಮಿತಿ ಸಭೆ, ದಿನಾಂಕ:17-10-2017 ರಂದು ನಡೆದ 18ನೇ ಖರೀದಿ ಸಮಿತಿ ಸಭೆ ಮತ್ತು ದಿನಾಂಕ:14-12-2017 ರಂದು ನಡೆದ 19ನೇ ಖರೀದಿ ಸಮಿತಿ ಸಭೆಯ ಸಭಾ ನಡವಳಿಗಳನ್ನು ಓದಿ ಅನುಮೋದಿಸುವ ಬಗ್ಗೆ. | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:06.09.2017ರಂದು ನಡೆದ 17ನೇ ಖರೀದಿ ಸಮಿತಿ ಸಭೆ, ದಿನಾಂಕ 17.10.2017ರಂದು ನಡೆದ 18ನೇ ಖರೀದಿ ಸಮಿತಿ ಸಭೆ ಹಾಗೂ ದಿನಾಂಕ: 14-12-2017 ರಂದು ನಡೆದ 19ನೇ ಖರೀದಿ ಸಮಿತಿ ಸಭೆಯಲ್ಲಿ ಚರ್ಚಿಸಿ ತೆಗೆದುಕೊಂಡ ನಿರ್ಣಯಗಳ ಸಭಾ ನಡವಳಿಯನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. ಸದರಿ ಸಭೆಯ ನಡವಳಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

<table>
<tr><th>ಅಜೆಂಡಾ ಕ್ರ.ಸಂ.</th><th>ವಿಷಯ</th><th></th></tr>
<tr><td>04</td><td>ದಿನಾಂಕ:14.02.2017 ಮತ್ತು 28.11.2017 ರಂದು ನಡೆದ ಸಂಸ್ಥೆಯ ಮುಂಬಡ್ತಿ ಪರಿಶೀಲನಾ ಸಮಿತಿ ಸಭೆಯ ಸಭಾ ನಡವಳಿಗಳನ್ನು ಓದಿ ಅನುಮೋದಿಸುವ ಬಗ್ಗೆ.</td><td>ದಿನಾಂಕ:14.02.2017 ಮತ್ತು 28.11.2017 ರಂದು ಸಂಸ್ಥೆಯ ಬೋಧಕ ಸಿಬ್ಬಂದಿಗಳಿಗೆ ಪದೋನ್ನತಿ ಹಾಗೂ ಕಾಲಬದ್ಧ ಪದೋನ್ನತಿ ನೀಡಲು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಮುಂಬಡ್ತಿ ಹಾಗೂ ಕಾಲಬದ್ಧ ಪದೋನ್ನತಿಗೆ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ನಿಯಮಾನುಸಾರ ಅರ್ಹರಾದ ಈ ಕೆಳಕಂಡ ಬೋಧಕ ಸಿಬ್ಬಂದಿಗಳಿಗೆ ಆಡಳಿತ ಮಂಡಳಿ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷೆಯ ಮೇರೆಗೆ ಸಂಬಂಧಪಟ್ಟ ಬೋಧಕ ಸಿಬ್ಬಂದಿಗಳಿಗೆ ಅಧಿಕೃತ ಜ್ಞಾಪನ ಪತ್ರ ಜಾರಿಗೊಳಿಸಿರುವುದನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.
<br><br>
<u>ದಿನಾಂಕ:14-02-2017ರಂದು ಪದೋನ್ನತಿ ಪಡೆದ ಸಿಬ್ಬಂದಿಯ ವಿವರ</u>
<table>
<tr><th>ಕ್ರ.ಸಂ.</th><th>ಹೆಸರು</th><th>ಪದೋನ್ನತಿ ಹೊಂದಿದ ಹುದ್ದೆ</th><th>ವಿಭಾಗ</th></tr>
<tr><td>01</td><td>ಡಾ.ರಾಜಶೇಖರ್.ಹೆಚ್.ಕೆ</td><td>ಪ್ರಾಧ್ಯಾಪಕರು</td><td>ವೈದ್ಯಶಾಸ್ತ್ರ</td></tr>
</table>
<br>
<u>ದಿನಾಂಕ:28-11-2017ರಂದು ಪದೋನ್ನತಿ ಪಡೆದ ಸಿಬ್ಬಂದಿಯ ವಿವರ</u>
<table>
<tr><td>01</td><td>ಡಾ.ವಿಶ್ವನಾಥ್.ಡಿ</td><td>ಸಹ ಪ್ರಾಧ್ಯಾಪಕರು</td><td>ನ್ಯಾಯ ವೈದ್ಯಶಾಸ್ತ್ರ</td></tr>
</table>
<br>
<u>ದಿನಾಂಕ:28-11-2017ರಂದು ಕಾಲಬದ್ಧ ಪದೋನ್ನತಿ ಆಯ್ಕೆಯಾದ ಸಿಬ್ಬಂದಿಗಳ ವಿವರ</u>
<table>
<tr><th>ಕ್ರ.ಸಂ.</th><th>ಹೆಸರು ಮತ್ತು ಪದನಾಮ</th><th>ವಿಭಾಗ</th></tr>
<tr><td>01</td><td>ಡಾ.ಶರತ್‌ಕುಮಾರ್ ಶೆಟ್ಟಿ<br>ಸಹಾಯಕ ಪ್ರಾಧ್ಯಾಪಕರು</td><td>ಮಿಣಿ ಜೀವಶಾಸ್ತ್ರ</td></tr>
</table>
ದಿನಾಂಕ:14.02.2017 ಮತ್ತು 28.11.2017 ರಂದು ನಡೆದ ಮುಂಬಡ್ತಿ ಹಾಗೂ ಕಾಲಬದ್ಧ ಪದೋನ್ನತಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.</td></tr>
<tr><td>05</td><td>ಬೋಧಕ ಆಸ್ಪತ್ರೆಯ ನೇತ್ರಾ ಚಿಕಿತ್ಸಾ ವಿಭಾಗದ Eye bankಗೆ ಅಗತ್ಯವಿರುವ ಉಪಕರಣಗಳನ್ನು</td><td>ಸಂಸ್ಥೆಯ ನೇತ್ರ ಚಿಕಿತ್ಸಾ ವಿಭಾಗದ Eye Bank 2015ರಂದು ಪ್ರಾರಂಭವಾಗಿದ್ದು ಇಲ್ಲಿಯವರೆಗೆ 48 ಕಣ್ಣುಗಳನ್ನು ಸಂಗ್ರಹಿಸಿ ಅವುಗಳನ್ನು ಸಂಸ್ಥೆಯ Eye Bankನಲ್ಲಿ</td></tr>
</table>

ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರ.ಸಂ.</th><th>ವಿಷಯ</th><th></th></tr>
<tr><td></td><td>ನಿಯಮಾನುಸಾರ ಖರೀದಿಸುವ ಬಗ್ಗೆ.</td><td>ಶೇಖರಣೆ ಮಾಡಲು ಅಗತ್ಯವಾದ ಉಪಕರಣಗಳು ಇಲ್ಲದೆ ಇದ್ದ ಕಾರಣದಿಂದಾಗಿ ಮಿಂಟೋ ಆಸ್ಪತ್ರೆ ಬೆಂಗಳೂರು ಇಲ್ಲಿಗೆ ಅಂಧ ರೋಗಿಗಳ ಉಪಯೋಗಕ್ಕಾಗಿ ಕಳುಹಿಸಿಕೊಡಲಾಗುತ್ತಿತ್ತು. ಇದೀಗ ನೇತ್ರ ಚಿಕಿತ್ಸಾ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪ್ರಾರಂಭವಾಗಿದ್ದು ಸದರಿ ವಿಭಾಗವು ಸುಸಜ್ಜಿತವಾದ ಸೌಲಭ್ಯಗಳನ್ನು ಹೊಂದಿದ್ದು ಈ ಸಂಸ್ಥೆಯಲ್ಲಿಯೇ ಕಣ್ಣುಗಳನ್ನು ಸಂಗ್ರಹಿಸಿ ಅಂಧ ರೋಗಿಗಳ ಉಪಯೋಗಕ್ಕೆ ಬಳಸಿಕೊಳ್ಳಲು ಕೆಳಕಂಡ ಉಪಕರಣಗಳನ್ನು ಖರೀದಿಸಿಕೊಡುವಂತೆ ವಿಭಾಗದ ಮುಖ್ಯಸ್ಥರು ಸಲ್ಲಿಸಿದ್ದ ಮನವಿ ಪತ್ರವನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.
<table>
<tr><th>Sl. No.</th><th>List of Equipments</th><th>Approximate cost</th><th>Quantity</th><th>Total</th></tr>
<tr><td>1</td><td>Laminar Flow hood class2 (ಸಂಗ್ರಹಿಸಿರುವ ಕಣ್ಣುಗಳಿಂದ ಕಾರ್ನಿಯಾವನ್ನು ತೆಗೆಯಲು)</td><td>1,60,000.00</td><td>1</td><td>1,60,000.00</td></tr>
<tr><td>2</td><td>Keratoplasty sets (ಸಂಗ್ರಹಿಸಿರುವ ಕಣ್ಣುಗಳಿಂದ ತೆಗೆದ ಕಾರ್ನಿಯಾವನ್ನು ಕಾರ್ನಿಯಾ ತೊಂದರೆಯಿಂದ ಅಂಧತ್ವದಿಂದ ಬಳಲುತ್ತಿರುವ ರೋಗಿಗಳಿಗೆ ಅಳವಡಿಸುವ ಬಗ್ಗೆ)</td><td>20,000.00</td><td>2</td><td>40,000.00</td></tr>
<tr><td></td><td>Total</td><td></td><td></td><td>2,00,000.00</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಹಿಮ್ಸ್ ಸಂಸ್ಥೆಯ Eye Bankನಲ್ಲಿಯೇ ನೇತ್ರಗಳನ್ನು ಸಂಗ್ರಹಿಸಿ ಅಂಧರೋಗಿಗಳ ಉಪಯೋಗಕ್ಕೆ ಬಳಸಿಕೊಳ್ಳಬಹುದಾಗಿರುವುದರಿಂದ ಮೇಲ್ಕಂಡ ಉಪಕರಣಗಳನ್ನು ಕೆ.ಟಿ.ಟಿ.ಪಿ</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | |
|---|---|---|
| | | ನಿಯಮಾನುಸಾರ ಖರೀದಿಸಿ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 06 | ಭಾನುಮತಿ.ಬಿ.ಎಸ್., ಮತ್ತು ಭಾಗ್ಯಲಕ್ಷ್ಮಿ. ಎಲ್.ಎಸ್., ಕಿರಿಯ ಪ್ರಯೋಗಶಾಲಾ ತಂತ್ರಜ್ಞರು, ರಕ್ತನಿಧಿ ಕೇಂದ್ರ, ಕೆ.ಆರ್. ಆಸ್ಪತ್ರೆ, ಎಂ.ಎಂ.ಸಿ &ಆರ್.ಐ ಮೈಸೂರು ಇವರುಗಳು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಹೊಂದಲು ನಿರಪೇಕ್ಷಣಾ ಪತ್ರ ಕೋರಿರುವ ಬಗ್ಗೆ. | ಭಾನುಮತಿ.ಬಿ.ಎಸ್., ಮತ್ತು ಭಾಗ್ಯಲಕ್ಷ್ಮಿ. ಎಲ್.ಎಸ್., ಕಿರಿಯ ಪ್ರಯೋಗಶಾಲಾ ತಂತ್ರಜ್ಞರು, ಇವರುಗಳು ಕೆ.ಆರ್. ಆಸ್ಪತ್ರೆ, ಎಂ.ಎಂ.ಸಿ & ಆರ್.ಐ ಮೈಸೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕೌಟುಂಬಿಕ ಹಿನ್ನೆಲೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಹೊಂದಲು ಹಿಮ್ಸ್ ಸಂಸ್ಥೆಯಿಂದ ನಿರಪೇಕ್ಷಣಾ ಪತ್ರ ಕೋರಿ ಮನವಿ ಸಲ್ಲಿಸಿರುವುದನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಯಲ್ಲಿ 48 ಕಿರಿಯ ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಗಳು ಮಂಜೂರಾಗಿದ್ದು, ಹಾಲಿ 43 ಕಿರಿಯ ಪ್ರಯೋಗಶಾಲಾ ತಂತ್ರಜ್ಞರುಗಳು ಕರ್ತವ್ಯ ನಿರ್ವಹಿಸುತ್ತಿದ್ದು 05 ಹುದ್ದೆಗಳು ಖಾಲಿ ಇರುವುದರಿಂದ ಮನವಿದಾರರ ಕೋರಿಕೆಯಂತೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಹೊಂದಲು ನಿರಪೇಕ್ಷಣಾ ಪತ್ರ ನೀಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 07 | ಶ್ರೀ. ಭಾಸ್ಕರ ನಿಡಗುಂದಿ, ಶುಶ್ರೂಷಕರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಶ್ರೀ. ಮಲ್ಲಿಕಾರ್ಜುನ್, ಶುಶ್ರೂಷಕರು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರುಗಳ ಪರಸ್ಪರ ವರ್ಗಾವಣೆಯ ಬಗ್ಗೆ ಸರ್ಕಾರದಿಂದ ಬಂದಿರುವ ಪತ್ರದ ಬಗ್ಗೆ. | ಶ್ರೀ. ಭಾಸ್ಕರ ನಿಡಗುಂದಿ, ಶುಶ್ರೂಷಕರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಶ್ರೀ. ಮಲ್ಲಿಕಾರ್ಜುನ್, ಶುಶ್ರೂಷಕರು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರುಗಳ ಪರಸ್ಪರ ವರ್ಗಾವಣೆಯ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದ ವರದಿಯನ್ನು ಸಲ್ಲಿಸುವಂತೆ ಸರ್ಕಾರದಿಂದ ಬಂದಿರುವ ಪತ್ರವನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಶ್ರೀ.ಮಲ್ಲಿಕಾರ್ಜುನ ಮತ್ತು ಶ್ರೀ ಭಾಸ್ಕರ ನಿಡಗುಂದಿ ಇವರುಗಳು ಶುಶ್ರೂಷಕರುಗಳಾಗಿ ಸೇವೆ ಸಲ್ಲಿಸುತ್ತಿದ್ದು, ಸದರಿ ನೌಕರರುಗಳು 2 ವರ್ಷ ಖಾಯಂ ಪೂರ್ವ ಸೇವಾವಧಿ ಪೂರ್ಣಗೊಳಿಸದ ಕಾರಣದಿಂದಾಗಿ ಸದರಿಯವರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ಹಿಮ್ಸ್ ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | |
|---|---|---|
| | | ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 08 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕೆಲವು ಶುಶ್ರೂಷಕ ಸಿಬ್ಬಂದಿಗಳು ತಮ್ಮ ವೈಯಕ್ತಿಕ ಕಾರಣಗಳಿಂದ ರಾಜೀನಾಮೆ ಪತ್ರ ಸಲ್ಲಿಸಿರುವುದನ್ನು ಅಂಗೀಕರಿಸುವ ಬಗ್ಗೆ. | ಹಿಮ್ಸ್ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಶುಶ್ರೂಷಕ ಸಿಬ್ಬಂದಿಗಳು ತಮ್ಮ ವೈಯಕ್ತಿಕ ಕಾರಣಗಳಿಂದಾಗಿ ತಾವು ಸಲ್ಲಿಸುತ್ತಿದ್ದ ಹುದ್ದೆಗೆ ರಾಜೀನಾಮೆ ಪತ್ರ ಸಲ್ಲಿಸಿದ್ದು, ಸದರಿ ನೌಕರರುಗಳಿಂದ ಸಂಸ್ಥೆಗೆ ಬರಬೇಕಾದ ಯಾವುದೇ ಬಾಕಿಗಳು ಇಲ್ಲದೆ ಇರುವುದರಿಂದ ರಾಜೀನಾಮೆಯನ್ನು ಅಂಗೀಕರಿಸಿ ಆಡಳಿತ ಮಂಡಳಿಯ ಘಟನ್ನೋತ್ತರ ಅನುಮೋದನೆಯ ನಿರೀಕ್ಷಣೆಯ ಮೇರೆಗೆ ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದನ್ನು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br><br>ಕ್ರಮ ಸಂಖ್ಯೆ / ನೌಕರರ ಹೆಸರು ಮತ್ತು ಹುದ್ದೆ / ಕರ್ತವ್ಯಕ್ಕೆ ವರದಿಮಾಡಿಕೊಂಡ ದಿನಾಂಕ / ಕರ್ತವ್ಯದಿಂದ ಬಿಡುಗಡೆಗೊಂಡ ದಿನಾಂಕ<br>01 / ಶ್ರೀಮತಿ.ಮಹಾಲಕ್ಷ್ಮಿ, ಶುಶ್ರೂಷಕರು / 05.01.2017 / 31.10.2017<br>02 / ಕುಮಾರಿ.ದಿವ್ಯಕುಮಾರಿ, ಶುಶ್ರೂಷಕರು / 22.12.2016 / 30.10.2017<br><br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಮೇಲ್ಕಂಡ ಸಿಬ್ಬಂದಿಗಳು ತಮ್ಮ ವೈಯಕ್ತಿಕ ಹಿನ್ನೆಲೆಯಲ್ಲಿ ಸ್ವಯಂ ಪ್ರೇರಿತವಾಗಿ ಸಂಸ್ಥೆಗೆ ರಾಜೀನಾಮೆ ಸಲ್ಲಿಸಿರುವುದರಿಂದ ಸದರಿಯವರ ರಾಜೀನಾಮೆಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 09 | ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ 04 ವೈದ್ಯರುಗಳನ್ನು (ಸಿ.ಎಮ್.ಓ) ತಾತ್ಕಾಲಿಕವಾಗಿ ಸಂಚಿತ ವೇತನದಡಿ ನೇಮಕ ಮಾಡಿಕೊಳ್ಳುವ ಬಗ್ಗೆ. | ಸಂಸ್ಥೆಯು ಪ್ರಾರಂಭವಾಗಿ 10 ವರ್ಷಗಳು ಕಳೆದಿದ್ದರೂ ಬೋಧಕ ಆಸ್ಪತ್ರೆಗೆ ಸಿ.ಎಮ್.ಓ. ಹುದ್ದೆಗಳು ಮಂಜೂರಾಗಿರುವುದಿಲ್ಲ, ಆಸ್ಪತ್ರೆಗೆ ಜಿಲ್ಲೆ ಮತ್ತು ಜಿಲ್ಲೆಯ ಸುತ್ತಮುತ್ತಲಿನಿಂದ ಬರುತ್ತಿರುವ ರೋಗಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದ್ದು ತುರ್ತುಚಿಕಿತ್ಸಾ ವಿಭಾಗದಲ್ಲಿ ವೈದ್ಯರುಗಳ ಕೊರತೆಯಿಂದಾಗಿ ಕಿರಿಯ ಸ್ಥಾನಿಯ ವೈದ್ಯರುಗಳ ಸೇವೆಯನ್ನೇ ಬಳಸಿಕೊಂಡು ಚಿಕಿತ್ಸೆ ನೀಡಲಾಗುತ್ತಿದೆ. ಸದರಿ ವೈದ್ಯರುಗಳಿಗೆ ಪ್ರಸ್ತುತ ನೀಡುತ್ತಿರುವ ವೇತನ ಕಡಿಮೆ ಇರುವ ಕಾರಣ ದಿಂದಾಗಿ ಕರ್ತವ್ಯ ನಿರ್ವಹಿಸಲು ಒಪ್ಪುತ್ತಿಲ್ಲ ತುರ್ತು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ★ ಹಿಮ್ಸ್, ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | |
|---|---|---|
| | | ಚಿಕಿತ್ಸಾ ವಿಭಾಗದಲ್ಲಿ ದಿನದ 24 ಗಂಟೆ ಸಮರ್ಪಕವಾಗಿ ವೈದ್ಯಕೀಯ ಚಿಕಿತ್ಸೆ ನೀಡಬೇಕಾಗಿದ್ದಲ್ಲಿ ಹೆಚ್ಚುವರಿಯಾಗಿ ಸಿ.ಎಮ್.ಓ. ಹುದ್ದೆಗಳು ಅತಿ ಅವಶ್ಯಕವಾಗಿರುತ್ತದೆ.<br>ಸರ್ಕಾರವು ಎಮ್.ಬಿ.ಬಿ.ಎಸ್. ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು 100 ರಿಂದ 150ಕ್ಕೆ ಹೆಚ್ಚಿಸಿದ್ದು ಹೆಚ್ಚುವರಿ ಅಗತ್ಯವಿರುವ ಹುದ್ದೆಗಳಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದ್ದ ಹಿನ್ನೆಲೆಯಲ್ಲಿ ಸಿ.ಎಮ್.ಓ. ಹುದ್ದೆಗಳು ಸೇರಿದಂತೆ ಹೆಚ್ಚುವರಿ ಹುದ್ದೆಗಳ ಸೃಜನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದರೂ ಸರ್ಕಾರದಿಂದ ಅಗತ್ಯ ಹುದ್ದೆಗಳು ಮಂಜೂರಾಗಿರುವುದಿಲ್ಲ. ಸಾರ್ವಜನಿಕ ರೋಗಿಗಳ ಹಿತದೃಷ್ಟಿಯಿಂದ ಸಂಸ್ಥೆಗೆ ಸಿ.ಎಮ್.ಓ. ಹುದ್ದೆಗಳು ಸರ್ಕಾರದಿಂದ ಮಂಜೂರಾಗುವವರೆಗೂ ತಾತ್ಕಾಲಿಕವಾಗಿ 04 ಸಿ.ಎಮ್.ಓ.ಗಳನ್ನು ಸಂಚಿತವೇತನದಡಿ ನೇಮಕ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಜಿಲ್ಲಾ ಆಸ್ಪತ್ರೆಯು ವೈದ್ಯಕೀಯ ಶಿಕ್ಷಣ ಇಲಾಖೆಗೆ ಹಸ್ತಾಂತರವಾದ ಆದೇಶದಲ್ಲಿ ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿಗಳು ಸಹ ವೈದ್ಯಕೀಯ ಶಿಕ್ಷಣ ಇಲಾಖೆಗೆ ವಿಲೀನಹೊಂದಿರುವುದರಿಂದ ಜಿಲ್ಲಾ ಆಸ್ಪತ್ರೆಗೆ ಮಂಜೂರಾಗಿರುವ ಮೂರು ಉಪ ಮುಖ್ಯ ವೈದ್ಯಾಧಿಕಾರಿಗಳ ಹುದ್ದೆಗಳ ಎದುರಿಗೆ ತಾತ್ಕಾಲಿಕವಾಗಿ 03 ಸಿ.ಎಮ್.ಓ ವೈದ್ಯರುಗಳನ್ನು ನೇಮಕ ಮಾಡಿಕೊಂಡು ಸರ್ಕಾರದಿಂದ ಸಿ.ಎಮ್.ಓ. ವೈದ್ಯರುಗಳ ಹುದ್ದೆಗಳು ಮಂಜೂರಾದ ಕೂಡಲೇ ಖಾಯಂ ಆಗಿ ಸಿ.ಎಮ್.ಓ. ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 10 | ಸಂಸ್ಥೆಯ ಕಾಲೇಜು ಕಟ್ಟಡದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಆಡಿಟೋರಿಯಂಗೆ ಬಾಡಿಗೆಯನ್ನು ನಿಗದಿಪಡಿಸುವ ಬಗ್ಗೆ | ಸಂಸ್ಥೆಯ ಕಾಲೇಜು ಕಟ್ಟಡದಲ್ಲಿ 750 ಆಸನಗಳ ಸಾಮರ್ಥ್ಯದ ಹವಾನಿಯಂತ್ರಿತ ಆಡಿಟೋರಿಯಂ ಕೊಠಡಿಯ ಕಾಮಗಾರಿಯು ಪೂರ್ಣಗೊಂಡಿದ್ದು, ಆಡಿಟೋರಿಯಂ ಬಳಸಿಕೊಳ್ಳಲು ಅವಕಾಶ ಮಾಡಿಕೊಡುವಂತೆ ಕೆಲವು ಸಂಘಟನೆಗಳ ಮುಖಂಡರುಗಳು, ಗಣ್ಯ ವ್ಯಕ್ತಿಗಳು, ಜನಪ್ರತಿನಿಧಿಗಳು, ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಂದ ಮನವಿ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | |
|---|---|---|
| | | ಪತ್ರಗಳು ಬರುತ್ತಿರುವುದರಿಂದ ಸದರಿ ಅಡಿಟೋರಿಯಂ ನೀಡಬಹುದೇ, ಹಾಗೂ ನೀಡಬಹುದಾಗಿದ್ದಲ್ಲಿ ಬಾಡಿಗೆ ನಿಗದಿಪಡಿಸಬಹುದೇ ಎಂಬ ವಿಷಯದ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಆಡಿಟೋರಿಯಂ ಕೊಠಡಿಯು ಕಾಲೇಜು ಕಟ್ಟಡಕ್ಕೆ ಹೊಂದಿಕೊಂಡಿರುವ ಕಟ್ಟಡವಾಗಿದ್ದು ಆಡಿಟೋರಿಯಂಗೆ ತೆರಳಲು ಪತ್ಯೇಕ ದಾರಿ ವ್ಯವಸ್ಥೆ ಇಲ್ಲದೆ ಇರುವುದರಿಂದ ಸಂಸ್ಥೆಯದಲ್ಲದ ಕಾರ್ಯಕ್ರಮಗಳಿಗೆ ನೀಡಿದ್ದಲ್ಲಿ ಪಾಠ-ಪ್ರವಚನಗಳಿಗೆ ತೊಂದರೆಯಾಗುವುದೆಂದು ಪರಿಗಣಿಸಿ ಸಂಸ್ಥೆಯ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಹೊರತುಪಡಿಸಿ ಇತರೆ ಯಾವುದೇ ಕಾರ್ಯಕ್ರಮಗಳಿಗೆ ಆಡಿಟೋರಿಯಂ ನೀಡಲು ಅವಕಾಶವಿಲ್ಲವೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.<br>"ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು" |

(ಡಾ.ಬಿ.ಸಿ. ರವಿಕುಮಾರ್),
ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿ, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.
ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

(ವಿ.ಮಂಜುಲ) ಭಾಆಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ
ಹಾಗೂ ಉಪಾಧ್ಯಕ್ಷರು,
ಆಡಳಿತ ಮಂಡಳಿ, ಹಿಮ್ಸ್, ಹಾಸನ.

(ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್)
ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.